ಬೆಂಗಳೂರಿನ ಇಸ್ರೋದಲ್ಲಿ ಟೆಕ್ನೀಷಿಯನ್ ಆಗಿ ಕಾರ್ಯನಿರ್ವಹಿಸುತ್ತಿರುವ ಶಶಿ ತರೀಕೆರೆ ತಮ್ಮ ವಿಭಿನ್ನ ಶೈಲಿಯ ಕಥೆಗಳ ಮೂಲಕ ಸಾಹಿತ್ಯಲೋಕದ ಗಮನ ಸೆಳೆದವರು. ಕಿರುಚಿತ್ರ ನಿರ್ಮಾಣ ಮತ್ತು ನಿರ್ದೇಶನದಲ್ಲಿಯೂ ಅವರಿಗೆ ಆಸಕ್ತಿ. ಆಗೀಗ ಕವಿತೆಗಳ ಗೆಳೆತನ ಮಾಡುವರು. 2020ನೇ ಸಾಲಿನ ಟೊಟೊ ಪ್ರಶಸ್ತಿ ಪಡೆದಿದ್ದಾರೆ. 'ಡುಮಿಂಗ' ಮತ್ತು 'ತಿರಾಮಿಸು' ಪ್ರಕಟಿತ ಕಥಾಸಂಕಲನಗಳು.

ಒಡಲಲ್ಲಿಟ್ಟ ಬಾಟಲುಗಳನ್ನು ಆಯ್ದುಕೊಂಡು ಮತ್ತೆ ನೀರು ತುಂಬಿಸಿ ಮತ್ತೆ ಅಲ್ಲಿಯೇ ಇಟ್ಟು ಬರುತ್ತಾಳೆ.

ಇವಳು ಹೀಗೆ ಮರದ ಬಳಿ ನೀರು ತುಂಬಿದ ಬಾಟಲಿಗಳನ್ನು ಇಡುವುದನ್ನು ಜನರು ಚಕಿತರಾಗಿ ನೋಡುತ್ತಾರೆ. ಬಗಲಿನಲ್ಲಿ ಜೋಳಿಗೆಯೊಂದು ಸಿಕ್ಕಿಸಿಕೊಂಡು ಮರವನ್ನು ಹುಡುಕುತ್ತಾ ಸಾಗುತ್ತಾಳೆ. ಯಾರು ಮಾತಾನಾಡಿಸಿದರೂ ಮಾತಾಡುವುದಿಲ್ಲ. ಖಾದಿಯ ಜೋಳಿಗೆ ಈಕೆಗೆಂದು ಭಾರವಾಗಿಲ್ಲ. ದೈನಂದಿನ ಭಾಗವಾಗಿ ಹೋಗಿದೆ. 'ಈಯಮ್ಮ ಸುಮಾರು ವರ್ಷಗಳಿಂದ ಹೀಗೆ ಮಾಡುತ್ತಿದ್ದಾಳೆ, ಪುಣ್ಯದ ಕೆಲಸ ಅಲ್ವಾ' ಎಂದು ಜನರು ಒಬ್ಬರಿಗೊಬ್ಬರು ತಮ್ಮಲ್ಲಿಯೇ ಇವಳ ಹಿಂದೆ ಮಾತಾಡಿದ್ದು ಇವಳಿಗೆ ಕೇಳಿಸುವುದಿಲ್ಲ. ಗಾಳಿ ಈ ಮಾತನ್ನೆಲ್ಲಾ ನುಂಗುತ್ತದೆ.

ಬ್ರೆಡ್ಡು ಬಿಸ್ಕತ್ತು ಚಹಾ ತೆಗೆದುಕೊಂಡು ಆಸ್ಪತ್ರೆಗೆ ಬರುತ್ತಾಳೆ. ಅದರಲ್ಲೂ ಮೊದಲಿಗೆ ಜನರಲ್ ವಾರ್ಡಿಗೆ. ಅಲ್ಲಿ ದಿನವೂ ಹೊಸ ರೋಗಿಗಳು. ನೆನ್ನೆ ಸೇರಿದ, ಸ್ವಲ್ಪ ಹೊತ್ತಿಗೆ ಡಿಸ್ಚಾರ್ಜ್ ಆಗುವ, ಎಮರ್ಜೆನ್ಸಿ ವಾರ್ಡಿಗೆ ಹೊಸದಾಗಿ ಸೇರ್ಪಡೆಗೊಳ್ಳುವ ಎಷ್ಟೊಂದು ಬಗೆ ಬಗೆಯ ಖಾಯಿಲೆಗೆ ತುತ್ತಾದ, ಹೊಸ ಗಾಯಗಳನ್ನು ಮಾಡಿಕೊಂಡ ಜನರನ್ನು ಕಾಳಜಿಯಿಂದ ನೋಡುತ್ತಾಳೆ. ಆತಂಕಿತರನ್ನು ಮಾತಾಡಿಸುತ್ತಾಳೆ. 'ಯಾವಾಗ ಬಂದೀರಿ, ನೋಡಿಕೊಳ್ಳಲು ಯಾರು ಇಲ್ಲವೇ, ಸಮಾಧಾನ ಮಾಡಿಕೊಳ್ಳಿ ಎಲ್ಲಾ ಸರಿಯಾಗುತ್ತದೆ, ಡಾಕ್ಟರು ಬಂದು ನೋಡಿದ್ರಾ ಏನಂದ್ರು' ಎಂಬುದನ್ನೆಲ್ಲಾ ಕಕ್ಕುಲಾತಿಯಿಂದ ಕೇಳುತ್ತಾಳೆ. ಇಡೀ ಜನರಲ್ ವಾರ್ಡ್ ತಿರುಗಿ ಯಾರಿಗೆ ಚಹಾ ಬೇಕೆಂದು ಕೇಳಿ ಥರ್ಮಾ ಫ್ಲಾಸ್ಕನ್ನು ಒತ್ತಿ ಬಿಸಿ ಚಹಾವನ್ನು ಕೊಡುತ್ತಾಳೆ. ಓಪಿಡಿಯ ಬಳಿ ನಿಂತು ಓಟಿಯಲ್ಲಿ ಯಾರಿದ್ದಾರೆ, ಯಾವಾಗ, ಎಷ್ಟು ಹೊತ್ತಿಗೆ ಡಿಸ್ಚಾರ್ಜ್ ಎಂದು ಕೇಳುತ್ತಾಳೆ.

ಡಿಸ್ಚಾರ್ಜು ಲೇಟಾದರೆ 'ಅವರಿಗೆ ಇದನ್ನು ಹಂಚಿ' ಎಂದು ಓಪಿಡಿ ನಿರ್ವಹಿಸುವ ಚಂದದ ಹುಡುಗ ಹುಡುಗಿಯರಿಗೆ ಸ್ವೀಟಿನ ಬಾಕ್ಸು ಕೊಟ್ಟು ಹೊರಡುತ್ತಾಳೆ.

ಒಮ್ಮೊಮ್ಮೆ ಪುರುಸೊತ್ತಿದ್ದರೆ ನಿಂತು ಕಾಯುತ್ತಾಳೆ. ಕೇಳುತ್ತಾಳೆ 'ಒಳಗೆ ಹೋದವರು ಸರಿ ಹೋಗುತ್ತಾರೆಯೇ' ಎಂದು. ಇವಳ ಮಾತಿನ ಅರ್ಥ ಓಟಿಯಲ್ಲಿ ಸರಭರ ಓಡಾಡುತ್ತಿರುವ ನರ್ಸುಗಳಿಗೆ, ಓಪಿಡಿಯಲ್ಲಿ ಕೂತವರಿಗೆ ಗೊತ್ತು. ಸರಿಹೋಗುವುದು ಎಂದರೆ ಹುಷಾರಾಗುವುದು ಎಂದಲ್ಲ. ದೈವಾಧೀನ ಆಗುವುದು. ದೇವರ ಬಳಿ ಸೇರಿಕೊಳ್ಳುವುದು. ಅದಕ್ಕೆ ಸರಿಹೋಗುವುದು ಎಂದು ಇವಳು ಬಳಸುತ್ತಾಳೆ. ಸರಿ ಎಂದರೆ ಎರಡು. ಬೆಸ ಎಂದರೆ ಒಂಟಿ. 'ಸರಿ ಹೋಗುವುದಿಲ್ಲ' ಎಂದು ನರ್ಸು ನಗುತ್ತಾ ಹೇಳಿದರೆ ಇವಳಿಗೆ ಖುಷಿ.

ನಂತರ ಓಟಿಯ ಬಳಿ ಹೋಗುತ್ತಾಳೆ. ಡಿಸ್ಚಾರ್ಜ್ ಆದವರಿಗೆ, ಅವರ ಜೊತೆಯಲ್ಲಿರುವವರ ಎದುರಿಗೆ ಸ್ವೀಟಿನ ಬಾಕ್ಸು ತೆರೆಯುತ್ತಾಳೆ. ಎಲ್ಲರಿಗೂ ಒಂದೇ ಪ್ರಶ್ನೆ 'ಯಾರಿವಳು, ನಾವು ಡಿಸ್ಚಾರ್ಜ್ ಆದರೆ ಇವಳಿಗೇಕೆ ಸಂತಸ' ಎಂದು ಗುಮಾನಿಯಿಂದಲೇ ಒಂದು ಚಿಕ್ಕ ಪೀಸನ್ನು ಮುರಿದುಕೊಳ್ಳುತ್ತಾರೆ. 'ಖುಷಿಯಾಗಿ ತಿನ್ನಿ' ಎಂದು ಒಂದು ಚಿಕ್ಕ ಕೂಸಿನಂತೆ ಹೇಳುತ್ತಾಳೆ.

ಹೊಸದಾಗಿ ಅಡ್ಮಿಟ್ ಆದವರ ಸಂಬಂಧಿಕರು ಅನುಮಾನದ ನೋಟದಲ್ಲಿ 'ಯಾರಿವಳು, ಯಾಕೆ ಹೀಗೆ ಎಲ್ಲರಿಗೆ ಪುಕ್ಕಟೆ ಚಹಾ ಕೊಡುತ್ತಿದ್ದಾಳೆ, ನಮ್ಮ ಕುಶಲೋಪರಿ ಕೇಳುತ್ತಿದ್ದಾಳೆ' ಎಂದೆಲ್ಲಾ ಯೋಚಿಸುತ್ತಾರೆ. ಬೆಳಗ್ಗಿನ ಶಿಫ್ಟಿಗೆ ಬಂದು ನೆಲವೊರೆಸುವ, ಬಚ್ಚಲು, ಶೌಚಾಲಯದ ಕೋಣೆಗಳನ್ನೆಲ್ಲಾ ಸ್ವಚ್ಛ ಮಾಡುವ ಕೆಲಸದ ಹೆಂಗಸರಿಗೆ, ದಿಂಬಿನ ಕವರುಗಳನ್ನು, ಬೆಡ್ಡಿನ ಹಾಸುಗಳನ್ನು